ಕಮಲಾ ಎನ್ನುವವಳು ತನ್ನೆರಡೂ ಕೈಗಳನ್ನು ಮುಂದೆ ಚಾಚಿ ನೋಡಿಕೊಂಡಳು. ಸುಂದರವಾದ ಅಂಗೈ, ಅಂಗೈಯಷ್ಟೇ ಸುಂದರವಾದ ಬೆರಳುಗಳು, ಆ ಸುಂದರವಾದ ಬೆರಳಲ್ಲಿ ಧರಿಸಿದ್ದ ಉಂಗುರವನ್ನು ನೋಡಿದಾಗ ಅವಳಿಗೆ ಖುಷಿಯಾಯಿತು. ಸಹೋದರಿಯರಿಗೆ ತನ್ನ ಸುಂದರವಾದ ಕೈಗಳನ್ನು ತೋರಿಸುತ್ತ, 'ನನ್ನ ಕೈಗಳ ಸೌಂದರ್ಯವನ್ನು ನೋಡಿ. ವೆಲ್‌ವೆಟ್ ಬಟ್ಟೆಯ ಹಾಗೆ ಎಷ್ಟೊಂದು ಮೃದುವಾಗಿವೆ. ಈ ಉಂಗುರವಂತೂ ನನ್ನ ಸುಂದರವಾದ ಬೆರಳಲ್ಲಿ ಇನ್ನೂ ಫಳಫಳ ಎಂದು ಹೊಳೆಯುತ್ತಿದೆ' ಎಂದಳು.

ವಿಮಲಾ ಅದೇ ಉದ್ಯಾನವನದಲ್ಲಿ ಅರಳಿದ್ದ ಹೂವೊಂದನ್ನು ಕಿತ್ತು, ಅದನ್ನು ತನ್ನ ಎರಡೂ ಅಂಗೈ ನಡುವೆ ಇಟ್ಟು ಮೆಲ್ಲಗೆ ಕಿವುಚಿದಳು. ಆಗ ವಿಮಲಾಳ ಕೈ ಆ ಹೂವಿನ ಸುವಾಸನೆಯಿಂದ ಕೂಡಿತು. ಸಹೋದರಿಯರಿಗೆ ತನ್ನ ಕೈಗಳನ್ನು ತೋರಿಸುತ್ತ, 'ನನ್ನ ಕೈಗಳೂ ಅಷ್ಟೇ ಸುಂದರವಾಗಿವೆ, ಅಲ್ಲದೆ ಘಂ ಎನ್ನುವ ಸುವಾಸನೆಯಿಂದ ಕೂಡಿವೆ' ಎಂದಳು.

ಶ್ಯಾಮಲಾ ಅಲ್ಲಿಯೇ ಇದ್ದ ದ್ರಾಕ್ಷಿ ಬಳ್ಳಿಯಲ್ಲಿ ಬಿಟ್ಟಿರುವ ದ್ರಾಕ್ಷಿ ಹಣ್ಣುಗಳನ್ನು ಕಿತ್ತುಕೊಂಡು ತನ್ನ ಕೈಯೊಳಗಿಟ್ಟುಕೊಂಡು ಎರಡೂ ಕೈಯಲ್ಲಿ ಗಟ್ಟಿಯಾಗಿ ಹಿಂಡಿ, 'ನೋಡಿ, ನನ್ನ ಕೈಯಲ್ಲಿ ದ್ರಾಕ್ಷಾರಸವೇ ಹರಿಯುತ್ತಿದೆ' ಎಂದು ತೋರಿಸಿದಳು.

ಕಮಲಾ, ವಿಮಲಾ ಮತ್ತು ಶ್ಯಾಮಲಾ ಈ ಮೂವರೂ ತಮ್ಮ ಸುಂದರವಾದ ಕೈಗಳನ್ನು ಹೊಗಳಿಕೊಳ್ಳುವುದನ್ನು ಕಂಡು ಪರಿಮಳಾಗೆ ಮುಜುಗರವಾಯಿತು. ಅವಳು ತನ್ನ ಅಂಗೈಯನ್ನು ಸಹೋದರಿಯರಿಗೆ ತೋರಿಸಲು ಹಿಂಜರಿದಳು. ಅದರೂ ಅವರೆಲ್ಲವರೂ, 'ಪರಿಮಳಾ, ನಿನ್ನ ಕೈ ತೋರಿಸು... ನೋಡೋಣ?' ಎಂದರು.

ಪರಿಮಳಾ ತನ್ನ ಕೈಯನ್ನು ಮುಚ್ಚಿಟ್ಟುಕೊಂಡಳು. ಅವರು ಬಿಟ್ಟೂ ಬಿಡದೇ ಅವಳ ಬೆನ್ನು ಬಿದ್ದರು, ಬೈದರು, ಹಾಸ್ಯ ಮಾಡಿದರು. ಪರಿಮಳಾ ಜೋರಾಗಿ ಅಳಲಾರಂಭಿಸಿದಳು. ಆಗ ಅದೇ ಹಾದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಅಜ್ಜಿಯೊಬ್ಬಳು ಪರಿಮಳಾ ಬಳಿ ಬಂದು ಅಳುತ್ತಿರುವ ಕಾರಣ ಕೇಳಿದಳು. ಆಗ ಮೂವರು ಸಹೋದರಿಯರು ವಿಷಯವನ್ನು ಅಜ್ಜಿಗೆ ತಿಳಿಸಿದರು.

ಅಜ್ಜಿ ಪರಿಮಳಾ ಬಳಿ ಸಾರಿ, 'ಮಗು, ನಿನ್ನ ಕೈಗಳನ್ನು ತೋರಿಸು ನೋಡುತ್ತೇನೆ' ಎಂದಳು. ಪರಿಮಳಾ ಅಜ್ಜಿಗೆ ತನ್ನ ಕೈ ತೋರಿಸಲು ಸಂಕೋಚಪಟ್ಟಳು. ಆಗ ಅಜ್ಜಿ ಪರಿಮಳಾ ಕೈಯನ್ನು ತನ್ನ ಕೈಯಲ್ಲಿ ಹಿಡಿದು ನೋಡಿದಳು. ಅವಳ ಕೈಗಳು ಬಹಳ ಒರಟಾಗಿದ್ದವು. 'ಮಗು, ನಿನ್ನ ಮೂವರು ಸಹೋದರಿಯರು ತಮ್ಮ ಕೈಗಳು ಮೃದುವಾಗಿವೆ ಎಂದು ಹೆಮ್ಮೆಪಟ್ಟರು. ಆದರೆ ನೀನು ನಿನ್ನ ಕೈಗಳು ಒರಟಾಗಿರುವುದಕ್ಕೆ ಹೆಮ್ಮೆ ಪಡಬೇಕು. ಏಕೆಂದರೆ ನಿನ್ನ ಕೈಗಳೇ ಅವರೆಲ್ಲರ ಕೈಗಳಿಗಿಂತಲೂ ತುಂಬಾ ಸುಂದರವಾಗಿವೆ' ಎಂದಳು.

ಅಜ್ಜಿಯ ಮಾತುಗಳನ್ನು ಕೇಳಿ ಆ ಮೂವರೂ ಮುಖ ನೋಡಿಕೊಂಡು ನಕ್ಕರು. 'ಅಜ್ಜಿ, ಒರಟು ಕೈಗಳು ಸುಂದರವೇ?' ಎಂದು ಕೇಳಿದರು. ಆಗ ಅಜ್ಜಿ, 'ಮಕ್ಕಳೇ, ದುಡಿಯುವ ಕೈಗಳೇ ಈ ಪ್ರಪಂಚದಲ್ಲಿ ಅತ್ಯಂತ ಸುಂದರವಾದ ಕೈಗಳು. ಒಂದು ಕೈ ಎಷ್ಟು ದುಡಿದಿರುತ್ತದೋ ಅಷ್ಟು ಮೃದುತ್ವವನ್ನು ಕಳೆದುಕೊಳ್ಳುತ್ತದೆ. ನಿಮ್ಮ ಮನೆಯಲ್ಲಿ ತಾಯಿಯ ಕಷ್ಟವನ್ನು ನೋಡಲಾರದೆ, ತಾಯಿಯೊಂದಿಗೆ ಪರಿಮಳಾ ದುಡಿದ ಪರಿಣಾಮ ಅವಳ ಕೈಗಳು ಇಂದು ಮೃದುತ್ವವನ್ನು ಕಳೆದುಕೊಂಡಿವೆ. ಪರಿಮಳಾ ಕೈಗಳೇ ತಾಯಿಗೆ ಕಷ್ಟಕಾಲದಲ್ಲಿ ಸಹಾಯ ಮಾಡಿರುವುದರಿಂದ ಅವಳ ಕೈಗಳು ಒರಟಾಗಿವೆ' ಎಂದಾಗ ಅಮ್ಮನಿಗೆ ಅಷ್ಟೆಲ್ಲಾ ಸಹಾಯ ಮಾಡಿದ ತಂಗಿಯನ್ನು ಗೇಲಿ ಮಾಡಿದ್ದಕ್ಕಾಗಿ ಅಕ್ಕಂದಿರು ಪಶ್ಚಾತ್ತಾಪ ಪಟ್ಟರು. ಮುಂದೆ ಅವರೆಲ್ಲರೂ ತಾಯಿಯ ಕೆಲಸದಲ್ಲಿ ಸಹಾಯ ಮಾಡಲು ಪ್ರಾರಂಭಿಸಿದರು.

